37.	ಮುಲ್ಲಾಮಾರಿ ಕೆಳದಂಡೆ	3.08	-	3.08
38.	ಹಿರೇಹಳ್ಳ	2.27	-	2.27
39.	ಮಸ್ಕಿನಾಲಾ	0.78	-	0.78
40.	ರಾಣೆಕೆರೆ ಪೂರಕ ನಾಲೆ	1.50	0.34	1.16
41.	ದೂದ್‌ಗಂಗಾ	4.00	-	4.00
42.	ಮಾರ್ಕಂಡೇಯ	4.00	-	4.00
43.	ರಾಮಥಾಲ್ ಏತ	4.50	-	4.50
44.	ಭೀಮ ಏತ	6.00	-	6.00
45.	ಕೃಷ್ಣಾ ಮೇಲ್ದಂಡೆ ಯೋಜನೆ-11	54.00	-	54.00
46.	ತುಂಗಾ ಮೇಲ್ದಂಡೆ	12.24	-	12.24
47.	ಸಿಂಗಟ್‌ಲೂರ	7.64	-	7.64
48.	ಗಂಢೋರಿನಾಲಾ	2.16	-	2.16
49.	ಬಸಾಪುರ ಏತ	0.60	-	0.60
50.	ನಾಸಲ್‌ವಾಡ್ ಏತ	0.55	-	0.55
51.	ಹರಿನಾಲಾ	0.80	-	0.80
52.	ಸಣ್ಣ ನೀರಾವರಿ ಯೋಜನೆಗಳು	119.83	101.67	18.16
	ಒಟ್ಟು	709.00*	481.64	247.46

*1977ರ ಒಪ್ಪಂದದ ಪ್ರಕಾರ ಮದ್ರಾಸ್ ನಗರದ ಕುಡಿಯುವ ನೀರಿನ ಪೂರೈಕೆಗಾಗಿ ಕರ್ನಾಟಕವು 5 ಟಿಎಂಸಿ ಪ್ರಮಾಣದ ನೀರನ್ನು ಹೊರತು ಪಡಿಸಿ.

ಕೃಷ್ಣ ನೀರಾವರಿ ಯೋಜನೆ

109 - ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೃಷ್ಣಾ ಜಲಾನಯನ ಪ್ರದೇಶದಲ್ಲಿ ಬರುವ ಭಾರಿ ಹಾಗೂ ಮಧ್ಯಮ ನೀರಾವರಿ ಯೋಜನೆಗಳಾವುವು?

ಆ) ಈ ಯೋಜನೆಗಳಿಗೆ 31-3-94ರವರೆವಿಗೆ ಆಗಿರುವ ಹಣವೆಷ್ಟು?

ಇ) ಈ ಯೋಜನೆಗಳಿಗೆ ನಿಗಧಿಪಡಿಸಿದ ನೀರಿನ ಟಿ.ಎಂ.ಸಿ. ಪ್ರಮಾಣ ಎಷ್ಟು, ಹಾಗೂ 31-3-1994ಕ್ಕೆ ಬಳಸಿಕೊಂಡ ನೀರಿನ ಟಿ.ಎಂ.ಸಿ. ಪ್ರಮಾಣ ಎಷ್ಟು?

ಈ) ಈ ಯೋಜನೆಗಳಿಗೆ ನಿಗಧಿಪಡಿಸಿದ ನೀರಾವರಿ ಕ್ಷೇತ್ರವೆಷ್ಟು? ಹಾಗೂ 31-3-1994ಕ್ಕೆ ನೀರಾವರಿಯಾಗಿರುವ ವಾಸ್ತವಿಕ ಕ್ಷೇತ್ರವೆಷ್ಟು?

ಶ್ರೀ ಹೆಚ್.ಡಿ.ದೇವೇಗೌಡ (ಮುಖ್ಯಮಂತ್ರಿಗಳು) :

ಅ) ಯೋಜನೆಗಳ ಹೆಸರಗಳನ್ನು ಲಗತ್ತಿಸಲಾಗಿರುವ ಅನುಬಂಧದಲ್ಲಿ ನೀಡಲಾಗಿದೆ.

ಆ)2548 ಕೋಟಿ ರೂ.ಗಳು.

ಇ) 1) ನಿಗದಿಪಡಿಸಿರುವ ನೀರಿನ ಪ್ರಮಾಣ 729 ಟಿಎಂಸಿ

2) ದಿನಾಂಕ 31-3-1994ರವರೆಗೆ ಬಳಸಿಕೊಂಡ ನೀರಿನ ಪ್ರಮಾಣ 481.54 ಟಿ.ಎಂ.ಸಿ.

ಈ) 1) ಉದ್ದೇಶಿಸಿರುವ ನೀರಾವರಿ ಕ್ಷೇತ್ರ 25.73 ಲಕ್ಷ ಹೆಕ್ಟೇರ್‌ಗಳು

2) ದಿನಾಂಕ 31-3-94 ರವರೆಗೆ ನೀರಾವರಿ 14.28 ಲಕ್ಷ ಹೆಕ್ಟೇರ್‌ಗಳು.

ಧಾರವಾಡ ಜಿಲ್ಲೆಯ ಎ ಮತ್ತು ಬಿ ನೌಕರುಗಳ ಬಗ್ಗೆ

111 - ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಧಾರವಾಡ ಜಿಲ್ಲೆಯಲ್ಲಿ ಎಷ್ಟು ಜನ ಸ್ಥಳೀಯ ಎ ಮತ್ತು ಬಿ ಸರ್ಕಾರಿ ನೌಕರರು ತಮ್ಮ ಸ್ವ-ತಾಲ್ಲೂಕಿನಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ?

ಆ) ಎ ಮತ್ತು ಬಿ ವರ್ಗದ ನೌಕರರನ್ನು ಅವರವರ ಸ್ವಂತ ತಾಲ್ಲೂಕಿನಲ್ಲಿ ನೌಕರಿ ಮಾಡದಿರಲು ಸರ್ಕಾರದ ಆಜ್ಞೆ ಇದೆಯೇ?

ಇ) ಹಾಗಿದ್ದರೆ, ಸ್ವ-ಸ್ಥಳ , ತಾಲ್ಲೂಕಿನಲ್ಲಿ ನೌಕರಿ ಮಾಡುವವರನ್ನು ವರ್ಗಾವಣೆ ಮಾಡಲು ಸರ್ಕಾರದವರು ಪರಿಶೀಲಿಸುವರೇ?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು):

ಅ) ಸರ್ಕಾರದ ಮಟ್ಟದಲ್ಲಿ ಈ ಬಗ್ಗೆ ಉತ್ತರಿಸಲು ಸದ್ಯದಲ್ಲಿ ಮಾಹಿತಿಗಳಿಲ್ಲ.

ಆ) ಹೌದು.

ಇ) ಸರ್ಕಾರದ ಮಾರ್ಗಸೂಚನೆಗಳನ್ವಯ ಕ್ರಮ ಕೈಗೊಳ್ಳಲಾಗುವುದು.

ರಾಜ್ಯದಲ್ಲಿರುವ ಕಾರಾಗೃಹಗಳನ್ನು ಸುಧಾರಣೆಗಳನ್ನು ತರುವಲ್ಲಿ ಡಾ|| ಕಿರಣ್ ಬೇಡಿಯವರ ನೆರವು

258 - ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರಾದ್) : ಮಾನ್ಯ ಕಾರಾಗೃಹಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದ ವಿವಿಧ ಕಾರಾಗೃಹಗಳಲ್ಲಿರುವ ಖೈದಿಗಳ ಒಟ್ಟು ಸಂಖ್ಯೆ ಎಷ್ಟು? (ವಿವಿಧ ವರ್ಗಗಳ ಖೈದಿಗಳ ಬಗ್ಗೆ ವಿವರಗಳನ್ನು ನೀಡುವುದು)

ಆ) ಈ ಖೈದಿಗಳ ಜೀವನ ಮಟ್ಟವನ್ನು ಸುಧಾರಿಸಲು ಹಾಗೂ ಅವರುಗಳಲ್ಲಿ ಮಾನಸಿಕ ಸ್ಥೈರ್ಯವನ್ನು ತುಂಬಿ ಅವರುಗಳ ಮನಪರಿವರ್ತನೆಗಾಗಿ ರಾಜ್ಯ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಇ) ಜೈಲಿನ ಸುಧಾರಣೆಗಾಗಿ ಮೆಗಾಸೆಸ್ಸ್ ಪ್ರಶಸ್ತಿಯನ್ನು ಪಡೆದಿರುವ ಡಾ|| ಕಿರಣ್ ಬೇಡಿ, ಕಾರಾಗೃಹಗಳ ಮಹಾ ನಿರ್ದೇಶಕರು, ನವದೆಹಲಿ, ಇವರ ಸಲಹೆಯನ್ನು ಪಡೆಯಲು ಸರ್ಕಾರದವರು ಪರಿಶೀಲಿಸುವರೇ?

ಈ) ಹಾಗಿದ್ದಲ್ಲಿ ಈ ವಿಷಯದಲ್ಲಿ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಎನ್. ಮಿರಾಜುದ್ದೀನ್ ಪಾಟೀಲ್ (ಕಾರಾಗೃಹಗಳ ರಾಜ್ಯ ಸಚಿವರು) :

ಅ) ಒಟ್ಟು 6,644

ಖೈದಿಗಳ ವಿವಿಧ ವರ್ಗಗಳ ವಿವರಗಳು:

		ಪುರುಷರು	ಮಹಿಳೆಯರು
1)	ವಿಚಾರಣಾ ಬಂಧಿಗಳು	5000	123
2)	ಸಹಾ ಖೈದಿಗಳು	1348	30
3)	ಕಾಫಿಮೋಸಾ ಕಾಯ್ದೆ ಯಡಿಯ ಡೆಟ್‌ನ್ಯೂಗಳು	1	-
4)	ಗೂಂಡಾ ಕಾಯ್ದೆಯಡಿಯ ಬಂಧಿಗಳು	7	-